**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು :- ಶ್ರೀ ಜಿ ಬಿ ಪಿ ವಕೀಲರಿಂದ ಎದುರುದಾರರ ಪರವಾಗಿ</u>**

11. ನಾನು ಓದಿಲ್ಲ. ಅಪಘಾತ ಆಗಿದ್ದು ಸಂಜೆ ಸುಮಾರು 5-00 ಗಂಟೆ ಆದರೆ ದಿನಾಂಕ ಗೊತ್ತಿಲ್ಲ. 3-4 ವರ್ಷಗಳ ಹಿಂದೆ ಆಗಿರುತ್ತದೆ. ನನ್ನದು ಗಂಜಿಗಟ್ಟೆ ಗ್ರಾಮ. ಅಲ್ಲಿಂದ ಚಿತ್ರದುರ್ಗಕ್ಕೆ 10 ಕಿ.ಮಿ. ಅಂತರ. ಚಿತ್ರದುರ್ಗದಲ್ಲಿ ಮರ ಮುಟ್ಟು ಸಾಮಿಲ್ ಗಳು ಇವೆ ಎಂದರೆ ಸರಿ. ಹೊಳಲ್ಕೆರೆಗೆ ಹೋಗಬೇಕಾದರೆ ಜಾನಕೊಂಡದ ಮೇಲೆ ಹೋಗಬೇಕು ಎಂದರೆ ಸರಿ. ಜಾನಕೊಂಡ ದಾಟ್ಟಿದ ಮೇಲೆ ದೇವಪುರದಲ್ಲಿ ಸಾಮಿಲ್ ಇದೆ ಎಂದರೆ ಸರಿ. ಅದಕ್ಕಿಂತ ಮುಂದೆ ಹೋದರೆ ನೂಲ್ಲೇನೂರಿನಲ್ಲಿ ಸಾಮಿಲ್ ಇದೆ ಎಂದರೆ ಸರಿ. ಆ ದಿನ ನಾನು ದೇವಸ್ಥಾನಕ್ಕೆ ಊಪಯೋಗಿಸಲು ಮರ ತರಲು ಹೊಳಲ್ಕೆರೆಗೆ ಹೋಗಿದೆ. ಈಗ ನಾನು ಹೇಳಿದ ಎರಡು ಸಾಮಿಲ್ ಗಳಲ್ಲಿ ದೇವಸ್ಥಾನಕ್ಕೆ ಮರ ಸಿಗ್ತುವೆ ಆದರೆ ಒಳ್ಳೆಯ ಮರ ಸಿಗಲಿ ಎಂದು ಹೊಳಲ್ಕೆರೆಗೆ ಹೋಗಿದೆ. ನಮ್ಮ ಊರಿನವರು ಹೊಳಲ್ಕೆರೆಯಲ್ಲಿ ಮರ ತಂದಿದ್ದರು, ಆದ ಕಾರಣ ನಾನು ಸಹ ಅಲ್ಲಿಗೆ ಹೋಗಿದ್ದೆ. ಹೊಳಲ್ಕೆರೆ ಯ ಗಣೇಶ ಸಾಮಿಲ್ ನಲ್ಲಿ ಒಳ್ಳೇ ಮರ ಸಿಗುತ್ತದೆ ಎಂದು ನಮ್ಮ ಊರಿನವರು ಹೇಳಿದ್ದರು. ತೇಗೆದ ಮರ ತರಲು ಹೋಗಿದೆ. ನಾನು ಹೋಗಿದ್ದ ಸಾಮಿಲ್ ನಲ್ಲಿ ತೇಗದ ಮರ ಇತ್ತು. ಚನ್ನಗಿರಿ ರಸ್ತೆಯಲ್ಲಿ ನಾನು ಹೋಗಿದ್ದ ಸಾಮಿಲ್ ಇದ್ದದು. ಪಟ್ಟಣದಿಂದ ಚನ್ನಗಿರಿ ರಸ್ತೆಯಲ್ಲಿ ಸ್ವಲ್ಪ ದೂರದಲ್ಲಿ ಸದರಿ ಸಾಮಿಲ್ ಇದೆ. ಸಾಮಿಲ್ ನಲ್ಲಿ ಏನಾದರು ವ್ಯವಹಾರ ಮಾಡಿದ್ದು ಉಂಟೆ ಎಂದರೆ ಸಾಕ್ಷಿಯು ಸಾಮಿಲ್‌ನ ಒಳಗೆ ಹೋಗುತ್ತಿರುವಾಗ ಅಪಘಾತವಾಗಿರುತ್ತದೆ. 7 ಅಡಿ ಮರ ಫಿನಿಶ್ ಮಾಡಿಸಿಕೊಂಡು ಬರಲು ಹೋಗಿದ್ದೆ. ನಾನು ಕುಯ್ದಿ ಮರವನ್ನು ಕೊಂಡುಕೊಳ್ಳಲು ಹೋಗಿದೆ. ಕುಯ್ದಿ ಮರವನ್ನು ವ್ಯವಸ್ಥಿತವಾಗಿ ಮಾರಾಟ ಮಾಡಲು ಒಂದು ಕಡೆ ಇಟ್ಟಿರುತ್ತಾರೆ ಎಂದರೆ ಸರಿ ಸಾಕ್ಷಿಯು ನಮಗೆ ಬೇಕಾದ ಮರ ನೋಡಲು ಹೋಗಿದ್ದೇನು. ನಮಗೆ ಬೇಕಾದ ಮರ ನೋಡಲು ನಾವು ಹೋಗಿದ್ದೇವು. ತುಂಡುಗಳನ್ನು ಲಾಟ್ ಗೆ ಹಾಕಿದ್ದರು. ಅದನ್ನು ಕಣ್ಣಲ್ಲಿ ನೋಡುತ್ತಿದ್ದೆ ಆಯಿಕೆ ಮಾಡು ವಷ್ಟರಲ್ಲಿ ನನಗೆ ಅಪಘಾತವಾಗಿರುತ್ತದೆ. ಸಾಮಿಲ್ ನಲ್ಲಿ ಇರುವ ಕ್ರೇನ್ ಮರದ ಲಾಟ್‌ನ್ನು ಕುಯಿಯುವ ಸ್ಥಳ ಎತ್ತು ಇಡಲು ಹಾಗೂ ಅಲ್ಲಿಂದ ಇಳಿಸಲು ಅದು ಫಿಕ್ಸ ಆಗಿರುವ ಕ್ರೇನ್ ಎಂದರೆ ಸಾಕ್ಷಿಯು ಮರವನ್ನು ಒಳಗೆ ತರಲು ಇರುವ ಕ್ರೇನ್. ಸಾಮಿಲ್ ರವರ ಕಚೇರಿಯಲ್ಲಿ ವಿಚಾರ ಮಾಡಲು ಹೋಗಿದ್ದು ಉಂಟೇ ಎಂದರೆ ಸಾಮಿಲ್ ಒಳಗೆ ಹೋಗಿದ್ದೆ

ಕಚೇರಿಗೆ ಹೋಗುವಷ್ಟರಲ್ಲಿ ಕ್ರೇನ್‌ನಿಂದ ಮರದ ತುಂಡು ನನ್ನ ಮೇಲೆ ಬಿದ್ದಿರುತ್ತದೆ. ಕಚೇರಿಗೂ ಮತ್ತು ನಾನು ನೋಡುತ್ತಿದ್ದ ಮರದ ತುಂಡಿಗೂ ಸುಮಾರು 15 ಅಡಿ ಅಂತರ ಇತ್ತು. ಮರದ ದಿಮ್ಮಿ ಗಳನ್ನು ನೋಡಲು ಎಳೆದಾಡುವ ಸಮಯದಲ್ಲಿ ಅವು ಬಿದ್ದರೆ ಈ ರೀತಿ ಗಾಯಗಳು ಆಗುವ ಸಾದ್ಯತೆಗಳು ಇವೆ ಎಂದರೆ ಸಾಕ್ಷಿಯು ಸಾಧ್ಯತೆ ಇದೆ ಆದರೆ ನನಗೆ ಮರದ ದಿಮ್ಮಿ ಬಿದ್ದಿರುತ್ತದೆ. ನಾನು ಹೇಳುವಂತೆ ಆ ದಿನ ಸಾಮಿಲ್‌ಗೆ ಹೋಗಿಲ್ಲ, ಎದುರುದಾರರಿಗೂ ಯಾವುದೇ ಕೊಟ್ಟಿಲ್ಲ, ಒಳ್ಳೆ ಮರದ ದಿಮ್ಮಿಗಳು ಬೇಕು ಎಂದು ಅವುಗಳನ್ನು ಎಳೆದಾಡಿಕೊಂಡು, ಅವು ಮೈಮೇಲೆ ಬಿದ್ದು ನನಗೆ ಗಾಯ ಆಗಿರುವುದು ಎಂದರೆ ಸರಿಯಲ್ಲ.

12. ಪೋಲಿಸರಿಗೆ ದೂರನ್ನು ನಾನೇ ಕೊಟ್ಟಿರುತ್ತೇನೆ. ಅಪಘಾತವಾದ ದಿನವೇ ದೂರು ಕೊಟ್ಟಿರುವುದು. ಪೋಲಿಸರಿಗೆ ದೂರು ಬರೆದುಕೊಳ್ಳಲು ನಾನೇ ಹೇಳಿರುತ್ತೇನೆ, ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಾನು ಪೋಲಿಸರಿಗೆ ದೂರು ಕೊಡುವಾಗ ಅದೇ ದಿನ ಅಪಘಾತವಾಯಿತು ಎಂದು ದೂರು ಕೊಟ್ಟಿರುತ್ತೇನೆ. ದೂರು ಕೊಡುವ ಮೊದಲು ನಾನು ಸಾಮಿಲ್ ಬಳಿ ಹೋಗಿಲ್ಲ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ದೂರು ಕೊಡುವ ಪೂರ್ವದಲ್ಲಿ ನನಗೆ ಯಾವುದೇ ಅಪಘಾತವಾಗಿಲ್ಲ.

13. ದೂರಿನಲ್ಲಿ ನಮೂದಿಸಿರುವ ಅಪಘಾತವಾಗಿದೆ ಎಂದು ಹೇಳವ ದಿಃ03.2.2022 ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ನಾನೇ ಹಾಜರು ಮಾಡಿರುವುದು. ವೈದ್ಯರಿಗೆ ವಿಚಾರವನ್ನು ಹೇಳಿ ಬರೆಸಿರುತ್ತೇನೆ. ಪಾಂಡುರಂಗಪ್ಪ ತಂದೆ ರಂಗಪ್ಪ, 65 ವರ್ಷ ವಯಸ್ಸು, ಗಂಜೀಕಟ್ಟೆ ಆ ವ್ಯಕ್ತಿ ನಾನೇ ಎಂದರೆ ಸರಿ. ವೈದ್ಯರಿಗೆ ಸಾಮಿಲ್ ನಲ್ಲಿ ನನಗೆ ಅಪಘಾತವಾಗಿದೆ ಎಂದು ಹೇಳಿ ಬರೆಸಿರುತ್ತೇನೆ. ವೈದ್ಯರ ಬಳಿ ಚಿಕಿತ್ಸೆ ಪಡೆಯುವಾಗ ನಾನು ಕ್ರೇನ್ ನಲ್ಲಿ ಇದ್ದ ತುಂಡನ್ನು ಎತ್ತುವಾಗ ಅಪಘಾತವಾಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಡಾ.ಬಸವರಾಜ ರವರಿಂದ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು 12 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಈಗಲ್ಲೂ ಸಹ ಆ ವೈದ್ಯ ಸರ್ಕಾರ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಗೊತ್ತಿಲ್ಲ. ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಬಸವೇಶ್ವರ ಆಸ್ಪತ್ರೆಯಲ್ಲಿ ಡಾ. ವೆಂಕಟಶಿವ ರೆಡ್ಡಿ ವೈದ್ಯರ ಬಳಿ ಮುಂದುವರೆದ ಚಿಕಿತ್ಸೆ ಪಡೆದಿರುತ್ತೇನೆ. ನೋವು ಜಾಸ್ತಿ

ಕಾರಣ ಡಾ.ಬಸವರಾಜ್ ವೈದ್ಯರ ಬಳಿ ಚಿಕಿತ್ಸೆ ಪಡೆದಿರುವುದಿಲ್ಲ. ಡಾ. ಬಸವರಾಜ್ ವೈದ್ಯರ ನನಗೆ ಶಸ್ತ್ರಚಿಕಿತ್ಸೆ ಮಾಡಿದ ಬಗ್ಗೆ ಖುದ್ದು ಭೇಟಿಯಾಗಿ ನಾನು ವಿಚಾರಿಸಿಲ್ಲ. ಡಾ. ವೆಂಕಟಶಿವ ರೆಡ್ಡಿ ವೈದ್ಯರ ಬಳಿ ಚಿಕಿತ್ಸೆ ಗೆ 10-11 ಬಾರಿ ಚಿಕಿತ್ಸೆಗೆ ಹೋಗಿದೆ, ನ್ಯಾಯಾಲಯಕ್ಕೆ ಅದರ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಪೂರ್ಣ ಪ್ರಮಾಣವಾಗಿ ಗುಣಮುಖವಾಗಿದ್ದರಿಂದ ಆ ವೈದ್ಯರ ಹತ್ತಿರ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯವೂದೇ ಚಿಕಿತ್ಸೆ ಪಡೆದಿಲ್ಲ, ನಾನು ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿಲ್ಲ, ಪರಿಹಾರ ಪಡೆಯಲು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 70 ವರ್ಷ ವಯಸ್ಸು ಆಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ದುಡಿಮೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯ ಸುಳ್ಳು ಎಂದರೆ ಸರಿಯಲ್ಲ. ನನಗೆ ಯವೂದೇ ದುಡಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ.30,000/- ಆದಯ ಇತ್ತು ಎಂದರೆ ಸರಿ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿ ಉಚಿತ ಚಿಕಿತ್ಸೆ ಪಡೆದಿರುತೆತೇನೆ ಎಂದರೆ ಸರಿಯಲ್ಲ. ನಾನು ರೂ.2 ಲಕ್ಷ ಚಿಕಿತ್ಸೆಗಾಗಿ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೂರು ಕೊಟ್ಟ ದಿನ ನಾನು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಎಂ.ಎ.ಸಿ.ಟಿ, ಚಿತ್ರದುರ್ಗ